**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ. ಮಂಗಳೂರು,**
**ಕಾರ್ಯನಿರ್ವಹಣೆ ಪುತ್ತೂರು, ದ.ಕ.**

ಎಸ್.ಸಿ.ಸಂ. **5017/2018**

ಚಾ.ಸಾ.ಃ 1 ಪ್ರಾ.ಸಾ.ಃ 2

ದಿನಾಂಕಃ **15-02-2021** ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರುಃ ಸಚ್ಚಿದಾನಂದ

ತಂದೆಯ ಹೆಸರುಃ ರಾಮ ಪಾಟಾಳಿ

ವಯಸ್ಸು ಃ 44 ವರ್ಷ

ಉದ್ಯೋಗ ಃ ಕೃಷಿ

ವಾಸಸ್ಥಳ ಃ ಮಾಣಿಬೆಟ್ಟು ಮನೆ, ಪುತ್ತೂರು ತಾಲೂಕು.

---

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ-

1. ನನಗೆ ಆರೋಪಿಗಳು ಗೊತ್ತು. 1ನೇ ಆರೋಪಿ ವಿನೋದ್ ಆಳ್ವ ನನ್ನ ನೆರೆಕರೆಯವರು. ಅವರು ನನಗೆ ಅಧಿಕಾರ ಪತ್ರವನ್ನು ಕೊಟ್ಟಿದ್ದು, ಸುಮಾರು 13 ವರ್ಷಗಳಿಂದ ಅವರ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ. 1ನೇ ಆರೋಪಿ ಚಲನಚಿತ್ರ ನಟನಾಗಿರುತ್ತಾರೆ. 1ನೇ ಆರೋಪಿಯು ನನಗೆ ಸರಿಯಾಗಿ ಸಂಬಳವನ್ನು ಕೊಡುತ್ತಿರಲಿಲ್ಲ, ಆದ್ದರಿಂದ ನಾನು ದಿನಾಂಕಃ 07.03.2015 ರಂದು ಕೆಲಸವನ್ನು ಬಿಟ್ಟೆನು. ನಂತರ ನಾನು ನಮ್ಮ ಮನೆಯಲ್ಲೇ ಕೃಷಿ ಮಾಡುತ್ತಿದ್ದೆನು. 5 ತಿಂಗಳ ನಂತರ ಅವರು ನನಗೆ ನೀಡಿದ್ದ ಅಧಿಕಾರ ಪತ್ರವನ್ನು ನೋಟೀಸು ಕೊಟ್ಟು ರದ್ದುಪಡಿಸಿದರು. ಆ ನೋಟೀಸಿಗೆ ನಾನು ಉತ್ತರ ಕೊಡಲಿಲ್ಲ.

2. ದಿನಾಂಕಃ 15.11.2015 ರಂದು ನನ್ನ ಮೋಟಾರ್ ಸೈಕಲ್ ನಂಬ್ರ ಕೆಎ-21-ಆರ್-1244ರಲ್ಲಿ ಈಶ್ವರಮಂಗದಲ್ಲಿರುವ ಹಾಲಿನ ಡೈರಿಗೆ ಹಾಲು ಹಾಕಲು ಬೆಳಿಗ್ಗೆ 7.15 ಗಂಟೆಗೆ ಹೋಗುತ್ತಿದ್ದಾಗ ದೊಡ್ಡಮನೆ ಬಳಿ ತಲುಪಿದಾಗ ಮದರಸಕ್ಕೆ ಹೋಗುವ ಹುಡುಗನೊಬ್ಬ ನನ್ನನ್ನು ನೋಡಿ ಬರುತ್ತೇನೆಂದು ಹೇಳಿದನು. ನಾನು ಆ ಹುಡುಗನನ್ನು ನನ್ನ ಮೋಟಾರ್ ಸೈಕಲಿನಲ್ಲಿ ಕರೆದುಕೊಂಡು

ಹೋದೆನು. ಆ ಹುಡುಗನ ಜೊತೆ ಹನುಮಗಿರಿ ಆಂಜನೇಯ ದೇವಸ್ಥಾನದ ಪಕ್ಕ ವಾಲ್ಮೀಕಿ ವಿಹಾರ ಆಶ್ರಮದ ಸ್ವಲ್ಪ ಕೆಳಗೆ ಎದುರಿನಿಂದ ಅಂದರೆ ಈಶ್ವರಮಂಗಲದಿಂದ ಕುಕ್ಕಾಜೆ ಕಡೆಗೆ ಬರುವ ರಸ್ತೆಯಲ್ಲಿ ಜೀಪೊಂದು ಬಂದು ತೀರಾ ಎಡಬದಿಯಲ್ಲಿದ್ದ ನನಗೆ ಗುದ್ದಿದನು. ನಾನು ಚರಂಡಿಗೆ ಬಿದ್ದೆನು. ನಾನು ಬಿದ್ದಾಗ ಹುಡುಗನು ಕೂಡ ಬಿದ್ದನು. ನನ್ನ ಹಾಲಿನ ಕ್ಯಾನು ಕೂಡ ಬಿದ್ದಿತು. ನಾನು ಬಿದ್ದ ಕೂಡಲೇ ಜೀಪಿನಲ್ಲಿದ್ದ 2ನೇ ಆರೋಪಿಯು ಕಂಬಳಿ ಹೊದ್ದುಕೊಂಡು ಕೈಯಲ್ಲಿ ಕಬ್ಬಿಣದ ರಾಡನ್ನು ಹಿಡಿದುಕೊಂಡು ಓಡಿಸಿಕೊಂಡು ಬಂದನು, ಆಗ ನಾನು ಗುಡ್ಡದ ಕಡೆಗೆ ಓಡಿ ಹೋದೆನು. ಆಗ 2ನೇ ಆರೋಪಿಯ ಕಂಬಳಿ ಆತನ ಕಾಲಿಗೆ ತಾಗಿ ಆತ ಬಿದ್ದನು. ನಾನು ಓಡುವಾಗ ನನ್ನ ಪಂಚೆ ಬಿದ್ದಿತು. ಅರ್ಧ ಗಂಟೆ ಕಳೆದ ಮೇಲೆ ಆ ಹುಡುಗ ನನ್ನ ಪಂಚೆಯನ್ನು ರೋಡಿನಲ್ಲಿ ತೆಗೆದುಕೊಂಡು ಬಂದನು. ಆ ಸಮಯದಲ್ಲಿ ಇನ್ನೊಬ್ಬ ಸಾಕ್ಷಿಯಾದ ಚಾ.ಸಾ.6 ಕೊರಗಪ್ಪ ಗೌಡ ಅಲ್ಲಿದ್ದರು. ಅವರು ಏನು ವಿಷಯ ಎಂದು ಕೇಳಿದಾಗ ಜೀಪಿನಲ್ಲಿ ಬಂದು ಈ ತರಹ ಗುದ್ದಿದರು ಎಂದು ಹೇಳಿದೆನು. ಆ ಜೀಪನ್ನು ನಾನೇ ನೋಡಿದ್ದೇನೆ. ಅದು ಹನುಮಗಿರಿ ಕೋದಂಡ ರಾಮ ದೇವಸ್ಥಾನದ ಪಕ್ಕ ಅಂಗಡಿಯ ಮುಂದೆ ಬೆಳಿಗ್ಗೆ ನಿಂತಿತ್ತು ಎಂದು ಹೇಳಿದರು.

ನನ್ನ ಜೊತೆ ಬಂದಿದ್ದ ಆ ಹುಡುಗನ ಹೆಸರು ಆಸಿರ್ ಎಂದಾಗಿರುತ್ತದೆ. ಅವರು ಪ್ರಾ.ಸಾ.1 ಆಗಿರುತ್ತಾರೆ. ಆ ಜೀಪು ಗ್ರೇ ಬಣ್ಣದ್ದಾಗಿದ್ದು, ಅದಕ್ಕೆ ನಂಬರ್ ಪ್ಲೇಟ್ ಇರಲಿಲ್ಲ. ನಂತರ ನಾನು, ಪ್ರಾ.ಸಾ.1 ಹಾಗೂ ಚಾ.ಸಾ.6 ಸೇರಿ ಬಿದ್ದಿದ್ದ ನನ್ನ ಬೈಕನ್ನು ಎತ್ತಿ ನನ್ನ ಮನೆಗೆ ಹೋದೆನು. ಮನೆಯಲ್ಲಿ ಯಾರೂ ಇರಲಿಲ್ಲ. ನನ್ನ ತಮ್ಮನ ಮದುವೆ ಇದ್ದ ಕಾರಣ ವಸ್ತುಗಳನ್ನು ಖರೀದಿ ಮಾಡಲು ಹೋಗಿದ್ದರು.

ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ನನ್ನ ವಾಹನಕ್ಕೆ ಡಿಕ್ಕಿ ಪಡಿಸಿ, ಹಲ್ಲೆ ಮಾಡಲು ಯತ್ನಿಸಿ ಈ ಕೃತ್ಯ ಎಸಗಿರುತ್ತಾರೆ. ಈ ಘಟನೆ ಬೆಳಿಗ್ಗೆ 7.15-7.30 ಗಂಟೆ ಒಳಗೆ ಆಗಿರುತ್ತದೆ. 1ನೇ ಆರೋಪಿ ಮತ್ತು ಚಾ.ಸಾ.3 ಭರತೇಶ್ ರೈಯವರ ನಡುವೆ ದ್ವೇಷ ಇತ್ತು. 1ನೇ ಆರೋಪಿಯಿಂದ ನಾನು ಕೆಲಸ ಬಿಟ್ಟು ಬರಲು ಚಾ.ಸಾ.3 ಕಾರಣ ಎಂದು 1ನೇ ಆರೋಪಿ ಹೇಳುತ್ತಿದ್ದರು. ಅದೇ ದಿನ ರಾತ್ರಿ 10.00

ಗಂಟೆಗೆ ನಾನು ದೂರನ್ನು ಕೊಟ್ಟೆನು. ಆ ಜೀಪಿನಲ್ಲಿ ಇಬ್ಬರು ಇದ್ದರು. ಅವರು ಮುಖಕ್ಕೆ ಕವರ್ ಹಾಕಿಕೊಂಡಿದ್ದರು. ನಾನು ಪೊಲೀಸರಿಗೆ ಕೊಟ್ಟ ದೂರನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

3. ನಂತರ 16ನೇ ತಾರೀಕಿಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಘಟನೆ ನಡೆದ ಸ್ಥಳದ ಹೆಸರು ಕೆಳಂದೂರು ಚಡವು. ಘಟನಾ ಸ್ಥಳದಲ್ಲಿ ಜೀಪಿನ ಟಯರ್ ಮಾರ್ಕ್ ಗಳು ಹಾಗೂ ಹಾಲಿನ ಕ್ಯಾನಿನ ಮುಚ್ಚಳಕ್ಕೆ ನಾನು ಹಾಕಿದ್ದ ಪ್ಲಾಸ್ಟಿಕ್ ರಟ್ಟೆ ಚರಂಡಿಯಲ್ಲಿ ಬಿದ್ದಿತ್ತು. ಸದ್ರಿ ಸ್ಥಳದಲ್ಲಿ ಡಾಂಬರು ರಸ್ತೆ 10 ರಿಂದ 12 ಅಡಿ ಮತ್ತು ಮಣ್ಣು ರಸ್ತೆ ಎರಡೂ ಕಡೆ 3 ಅಡಿ ಇತ್ತು. ಕುಕ್ಕಾಜೆಯಿಂದ ಈಶ್ವರಮಂಗಲಕ್ಕೆ ಹೋಗುವ ಬಲಗಡೆ ವಾಸುದೇವ ಭಟ್ಟರವರ ಜಾಗ ಇತ್ತು. ಈ ಘಟನೆಯು ಅದೇ ರಸ್ತೆಯ ಎಡಬದಿ ಆಗಿತ್ತು. ಅಲ್ಲಿ ಚರಂಡಿಯ ನಂತರ 10-12 ಅಡಿ ಎತ್ತರದ ಮಹಾಬಲೇಶ ಭಟ್ಟರವರ ಮಣ್ಣಿನ ಧರೆ ಇರುತ್ತದೆ. ಸ್ಥಳ ಮಹಜರನ್ನು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನದವರೆಗೆ ಬರೆದರು. ಸ್ಥಳದಲ್ಲಿ ಪ್ಲಾಸ್ಟಿಕ್ ಕವರನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಆ ಪ್ಲಾಸ್ಟಿಕ್ ಕವರನ್ನು ನೋಡಿದರೆ ಗುರುತಿಸುತ್ತೇನೆ. ಸದ್ರಿ ಪ್ಲಾಸ್ಟಿಕ್ ಕವರನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಸಾಕ್ಷಿದಾರರಾಗಿ ಚಾ.ಸಾ.10 ಮತ್ತು 11ರವರು ಹಾಜರಿದ್ದು, ಸಹಿ ಹಾಕಿರುತ್ತಾರೆ. ಸ್ಥಳದಲ್ಲಿ ತಯಾರಿಸಿದ ನಕಾಶೆಗೂ ನಾನು ಸಹಿ ಹಾಕಿರುತ್ತೇನೆ. ಮಹಜರನ್ನು ನೋಡುತ್ತಿದ್ದು, ಅದನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

4. ನನ್ನ ಬೈಕಿನ ಕ್ಲಚ್ ಗೆ, ಎದುರಿನ ಡೂಮ್ ಗೆ ಮತ್ತು ಗೇರು ಹಚ್ಚುವಂತಹ ಜಾಗಕ್ಕೆ ಡ್ಯಾಮೇಜ್ ಆಗಿತ್ತು. 16ನೇ ತಾರೀಕಿಗೆ ನಾನು ಪೊಲೀಸು ಠಾಣೆಗೆ ಹೋಗಿ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ. ಹಿಂದೆ ಕೊಟ್ಟ ದೂರಿನಲ್ಲಿ ಕೆಲವು ವಿಷಯಗಳು ಬಿಟ್ಟು ಹೋದ ಬಗ್ಗೆ ಸದ್ರಿ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ.

5. ಪೊಲೀಸರಿಗೆ ನಾನು 1ನೇ ಆರೋಪಿಯು ರದ್ದುಪಡಿಸಿದ ಜಿಪಿಎಗಳ (2008 ಮತ್ತು 2013ರ ಅಧಿಕಾರ ಪತ್ರಗಳ) ಜೆರಾಕ್ಸ್ ಪ್ರತಿಗಳನ್ನು ಹಾಗೂ 1ನೇ ಆರೋಪಿಯು ಅದನ್ನು ರದ್ದುಪಡಿಸಿ ವಕೀಲರ ಮೂಲಕ ಕೊಟ್ಟ ನೋಟೀಸಿನ ಪ್ರತಿಯನ್ನು ಕೊಟ್ಟಿರುತ್ತೇನೆ. ಸದ್ರಿ ದಾಖಲೆಗಳನ್ನು ಅನುಕ್ರಮವಾಗಿ ನಿ.ಪಿ.6, 7 ಮತ್ತು ನಿ.ಪಿ.8 ಎಂದು ಆರೋಪಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

6. ನನಗೆ ನೋವು ಮಾತ್ರ ಆಗಿದ್ದರಿಂದ ನಾನು ಆಸ್ಪತ್ರೆಗೆ ದಾಖಲಾಗಿರಲಿಲ್ಲ. 17ನೇ ತಾರೀಕಿಗೆ ನನ್ನ ಬೈಕನ್ನು ಠಾಣೆಯಲ್ಲಿ ಹಾಜರುಪಡಿಸಿರುತ್ತೇನೆ. ಆಗ ಪೊಲೀಸರು ತಯಾರಿಸಿದ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ಸದ್ರಿ ಮಹಜರನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ನನ್ನ ಬೈಕನ್ನು ನಾನು ಬಿಡಿಸಿಕೊಂಡಿರುತ್ತೇನೆ. ನನ್ನ ಬೈಕಿನ ಫೋಟೊಗಳನ್ನು ಮತ್ತು ಸಿ.ಡಿಯನ್ನು ನೋಡುತ್ತಿದ್ದು, 4 ಫೋಟೋಗಳನ್ನು ನಿ.ಪಿ.10 ಎಂದು ಮತ್ತು ಸಿ.ಡಿ.ಯನ್ನು ನಿ.ಪಿ.11 ಎಂದು ಗುರುತಿಸಲಾಯಿತು.

7. 18ನೇ ತಾರೀಕಿಗೆ ಜೀಪನ್ನು ಗುರುತು ಹಚ್ಚುವ ಸಲುವಾಗಿ ಮಂಡೆಕೋಲು ಗ್ರಾಮದ ದೇವರಗುಂಡದಿಂದ ದೇಲಂಪಾಡಿಗೆ ಹೋಗುವ ಸಾರ್ವಜನಿಕ ರಸ್ತೆಗೆ ಬರಲು ಹೇಳಿದ್ದರು. ಅದಕ್ಕೆ ನಂಬರ್ ಪ್ಲೇಟ್ ಇರಲಿಲ್ಲ. ಅದರ ಚಾಸಿಸ್ ನಂಬರ್ ಮತ್ತು ಇಂಜಿನ್ ನಂಬರನ್ನು ಬರೆದು ಅದರ ಎದುರು ಸೀಟಿನ ಎಡಭಾಗದಲ್ಲಿ ಇದ್ದ 5 ಇಂಚು ಸುತ್ತಳತೆಯ ಕಬ್ಬಿಣದ ಪೈಪನ್ನು ಪೊಲೀಸರು ಅಮಾನತುಪಡಿಸಿಕೊಂಡರು. ತನಿಖಾಧಿಕಾರಿಯವರು ಸೀಲು ಮಾಡಿ ಹಾಜರುಪಡಿಸಿರುವ ಒಂದು ಕಬ್ಬಿಣದ ಪೈಪನ್ನು ಅದರ ಕವರ್ ತೆಗೆದು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿರುತ್ತಾರೆ. ಸದ್ರಿ ಕಬ್ಬಿಣದ ಪೈಪನ್ನು ಮು.ಮಾ.2 ಎಂದು ಗುರುತಿಸಲಾಯಿತು. ಅದರ ಮೇಲೆ ನಾನು ಮತ್ತು ಸಾಕ್ಷಿದಾರರು ಸಹಿ ಹಾಕಿದ ಚೀಟಿಯನ್ನು ಅಂಟಿಸಿರುತ್ತಾರೆ. ಆ ಬಗ್ಗೆ ತಯಾರಿಸಿದ ಸೊತ್ತು ಸ್ವಾಧೀನತಾ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ಮಹಜರನ್ನು ನಿ.ಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ಸದ್ರಿ ಜೀಪನ್ನು ನೋಡಿದರೆ ಗುರುತಿಸುತ್ತೇನೆ. ಜೀಪಿನ 4 ಫೋಟೊಗಳನ್ನು ಒಟ್ಟಾಗಿ ನಿ.ಪಿ.13 ಎಂದು, ಅದರ ಸಿ.ಡಿ.ಯನ್ನು ನಿ.ಪಿ.14

ಎಂದು ಗುರುತಿಸಲಾಯಿತು. ಮು.ಮಾ.2ನ್ನು 2ನೇ ಆರೋಪಿಯು ನನ್ನನ್ನು ಅಟ್ಟಿಸಿಕೊಂಡು ಬರುವಾಗ ಕೈಯಲ್ಲಿ ಹಿಡಿದುಕೊಂಡಿದ್ದರು.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ನ್ಯಾಯಾಲಯದಲ್ಲಿದ್ದಾರೆ.

**ಪಾಟೀ ಸವಾಲು:** ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದ:-

**8.** ನಾನು ಮತ್ತು ಮೋಟಾರ್ ಸೈಕಲ್ ಬಿದ್ದಿದ್ದ ಚರಂಡಿಯು **2** ರಿಂದ **3** ಫೀಟ್ ಆಳ ಇತ್ತು. ನಾನು ಚರಂಡಿಯ ಗುಂಡಿಗೆ ಬಿದ್ದೆನು. ನನ್ನ ಹಿಂದೆ ಕುಳಿತಿದ್ದ ಪ್ರಾ.ಸಾ.**2** ಕೂಡ ಚರಂಡಿಗೆ ಬಿದ್ದನು. ಮೋಟಾರ್ ಸೈಕಲ್ ಕೂಡ ಚರಂಡಿಗೆ ಬಿತ್ತು. ಮೋಟಾರ್ ಸೈಕಲಿನ ಬಲಬದಿಗೆ ಬ್ರೇಕ್ ಇರುತ್ತದೆ. ಎಡಬದಿಗೆ ಕ್ಲಚ್ ಇರುತ್ತದೆ. ನಿ.ಪಿ.**10** ಎಂದು ಗುರುತಿಸಲಾಗಿರುವ ಫೋಟೋಗಳ ಪೈಕಿ **4**ನೇ ಫೋಟೋದಲ್ಲಿ ಅದರ ಕ್ಲಚ್ ಮುರಿದಿರುವುದು ಕಂಡು ಬರುವುದಿಲ್ಲ ಅಥವಾ ಅದಕ್ಕೆ ಯಾವುದೇ ಸ್ಕ್ರಾಚ್ ಮಾರ್ಕ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹಿಂದಿನಿಂದ ನೋಡುವಾಗ ಸದ್ರಿ ಬೈಕಿನ ಬಲಬದಿಯ ಗಾರ್ಡ್ ಸರಿಯಾಗಿರುವುದು ಕಂಡು ಬರುತ್ತದೆ. ನಿ.ಪಿ.**10**ರಲ್ಲಿರುವ ಫೋಟೊಗಳಲ್ಲಿ ಕಣ್ಣಿಗೆ ಕಾಣುವಂತೆ ಯಾವುದೇ ಡ್ಯಾಮೇಜ್ ಗಳು ಕಂಡು ಬರುವುದಿಲ್ಲ ಎನ್ನುವುದು ನಿಜ.

**9.** ನಿ.ಪಿ.**13** ಫೋಟೋಗಳಲ್ಲಿ ಕಾಣುವಂತೆ ಜೀಪಿಗೆ ಯಾವುದೇ ಡ್ಯಾಮೇಜುಗಳು ಇರುವುದಿಲ್ಲ ಎಂದರೆ ನಿಜ. ಜೀಪು ಅಮಾನತುಪಡಿಸಿದ ಸ್ಥಳವು ಯಾವುದೇ ಜನರು ಹೋಗದಿರುವಂತಹ ಸ್ಥಳವಾಗಿರುತ್ತದೆ. ನಿ.ಪಿ.**13**ರ **4** ಫೋಟೊಗಳಲ್ಲಿಯೂ ಕಾಣುವಂತೆ ಅಮಾನತುಪಡಿಸಿಕೊಂಡ ಸ್ಥಳದಲ್ಲೇ ಸದ್ರಿ ಫೋಟೊಗಳನ್ನು ತೆಗೆಯಲಾಗಿತ್ತು. ನಿ.ಪಿ.**13** ಫೋಟೊಗಳಲ್ಲಿ ಕಟ್ಟಡದ ಮುಂದೆ ಜೀಪಿನ ಫೋಟೊಗಳನ್ನು ತೆಗೆದಂತೆ ಕಾಣುತ್ತದೆ ಎಂದರೆ ನಿಜ. ನಾನು ಹೇಳಿದಂತಹ ಸ್ಥಳದಲ್ಲಿ ಸದ್ರಿ ಫೋಟೊಗಳನ್ನು ತೆಗೆಯಲಾಗಿಲ್ಲ ಎಂದರೆ ಸರಿಯಲ್ಲ.

**10.** **17**ನೇ ತಾರೀಕಿಗೆ ನನ್ನ ಬೈಕನ್ನು ಪೊಲೀಸು ಠಾಣೆಗೆ ಕೊಟ್ಟು ಬಂದಿದ್ದೇನೆ. ನಾನು ಜೀಪನ್ನು **50** ಮೀಟರ್ ದೂರದಿಂದ ನೋಡಿದ್ದೇನೆ. ಅದು **50-60** ಕಿ.ಮೀ. ವೇಗದಲ್ಲಿ ಬರುತ್ತಿತ್ತು. ಆ

ಸ್ಥಳದಲ್ಲಿ ನನ್ನ ಬೈಕು **20** ಕಿ.ಮೀ. ವೇಗದಲ್ಲಿತ್ತು. ಘಟನಾ ಸ್ಥಳದಲ್ಲಿ ಬ್ರೇಕ್ ಮಾರ್ಕ್ ಆಗಿರುವುದನ್ನು ನಾನು ಪೊಲೀಸರಿಗೆ ತೋರಿಸಿದ್ದೇನೆ. ಪೊಲೀಸರು ಆ ನಕಾಶೆಯಲ್ಲಿ ಬ್ರೇಕ್ ಮಾರ್ಕನ್ನು ತೋರಿಸಿಲ್ಲ. ನನ್ನ ಪ್ರಕಾರ ಮುಖಾಮುಖಿಯಾಗಿ ನಮ್ಮ ಬೈಕು ಮತ್ತು ಜೀಪುಗಳು ಪರಸ್ಪರ ಗುದ್ದಿವೆ. ವೇಗವಾಗಿ ಬಂದ ಜೀಪು ನನ್ನ ಬೈಕಿಗೆ ಗುದ್ದಿಯೇ ಬಿಟ್ಟಿತು. ಬಂದ ವೇಗಕ್ಕೆ ನನ್ನ ಬೈಕನ್ನು ಮಡ್ ರೋಡಿಗೆ ಇಳಿಸಿದೆ, ಅಲ್ಲಿಗೆ ಬಂದು ಗುದ್ದಿತು. ಜೀಪು ಗುದ್ದಿದ ವೇಗಕ್ಕೆ ಬೈಕು ತಳ್ಳಿ ಚರಂಡಿಗೆ ಬಿತ್ತು. ಬೈಕು ಜಾರಿಕೊಂಡು ಹೋದುದನ್ನು ಪೊಲೀಸರಿಗೆ ತೋರಿಸಿದ್ದೇನೆ. ಬೈಕಿನ ಎದುರಿಗೆ ನಾನು ಬಿದ್ದೆ. ನನ್ನ ಜೊತೆ ಇದ್ದ ಹುಡುಗ ಚರಂಡಿಗೆ ಬಿದ್ದ. ನಾನು ಬೈಕಿನ ಮುಂದೆ ಬಿದ್ದಾಗ ಜೀಪು ನನಗೆ ತಾಗಿದೆ. ಈ ವಿಚಾರವನ್ನು ನಾನು ಪೊಲೀಸರಿಗೆ ಹೇಳಿದ್ದೇನೆ. ಆದರೆ ದೂರು ಕೊಡುವಾಗ ಈ ವಿಚಾರ ಬರೆದಿರುವುದಿಲ್ಲ. ನಾನು ಗುಂಡಿಯಿಂದ ಏಳುವಾಗ **2-3** ನಿಮಿಷವಾಯಿತು. ಜೀಪು **20** ಫೀಟ್ ಮುಂದೆ ಹೋಗಿ ನಿಂತಿತು. ಆರೋಪಿಗಳು ಜೀಪನ್ನು ನಿಲ್ಲಿಸಿ ಆ **3** ನಿಮಿಷದೊಳಗೆ ನನ್ನಲ್ಲಿಗೆ ಬಂದಿದ್ದರು. ಆರೋಪಿಗಳು ನನಗೆ ಹೊಡೆದಿರುವುದಿಲ್ಲ.

**11.** ಈ ಘಟನೆಯಿಂದ ನನಗೆ ಸಣ್ಣಪುಟ್ಟ ಗಾಯಗಳಾಗಿದ್ದವು, ಆದ್ದರಿಂದ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ನಾನು ದೂರಿನಲ್ಲಿ ನನಗೆ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದು ಬರೆದಿರುವುದಿಲ್ಲ. ಬಾಯಿಯಲ್ಲಿ ಹೇಳಿದ್ದೆನು. ಘಟನೆಯಲ್ಲಿ ಪ್ರಾ.ಸಾ.**1**ರವರಿಗೆ ಗಾಯಗಳಾಗಿರಲಿಲ್ಲ. ಆರೋಪಿಗಳು ತಮ್ಮ ಜೀಪನ್ನು ನಿಲ್ಲಿಸಿ **5** ನಿಮಿಷ ನನ್ನನ್ನು ನೋಡುತ್ತಿದ್ದರು. ಆ ನಂತರ ಅವರು ಏನೂ ಮಾಡದೇ ಅವರಷ್ಟಕ್ಕೆ ಹೋದರು. ನಾನು ಅರ್ಧ ಗಂಟೆ ಗುಡ್ಡೆಯಲ್ಲೇ ಕುಳಿತುಕೊಂಡೆನು. ಆ ನಂತರ ಮನೆಗೆ ಹೋದೆನು. ನಾನು ಗುಡ್ಡೆಯಿಂದ ರೋಡಿಗೆ ಇಳಿದು ನಂತರ ಮನೆಗೆ ಹೋದೆನು. ಬೈಕನ್ನು ದೂಡಿಕೊಂಡು ಮನೆಗೆ ಹೋದೆನು. ಯಾಕೆಂದರೆ ಅದರ ಗೇರ್ ಡ್ಯಾಮೇಜ್ ಆಗಿತ್ತು. ಈಶ್ವರಮಂಗಲದಲ್ಲಿ ಆ ಬೈಕನ್ನು ರಿಪೇರಿ ಮಾಡಿಸಿದೆನು. ನಾನು ಗೇರನ್ನು ದುರಸ್ತಿ ಮಾಡಿ ನಂತರ ಪೊಲೀಸರಿಗೆ ಕೊಟ್ಟಿರುತ್ತೇನೆ. ಪೊಲೀಸರು ಠಾಣೆಯಲ್ಲಿ ಅದನ್ನು ನೋಡಿದಾಗ ಅದರ ಗೇರ್ ಸರಿಯಾಗಿತ್ತು.

**12.** **17**ನೇ ತಾರೀಕಿಗೆ ನಾನು ಬೈಕು ರಿಪೇರಿ ಮಾಡಿಸಲು ಹೋಗಿದ್ದೆನು. ಘಟನೆ ನಡೆಯಿತೆನ್ನಲಾದ ಜಾಗದಿಂದ ಈಶ್ವರಮಂಗಲಕ್ಕೆ ಅರ್ಧ ಕಿ.ಮೀ. ದೂರವಿದೆ. ನನ್ನ ವ್ಯವಹಾರದ

ಕಾರ್ಯಸ್ಥಾನ ಈಶ್ವರಮಂಗಲ. ಘಟನೆ ಆಗಿದೆ ಎನ್ನಲಾದ ದಿನ ರಾತ್ರಿ **10.00** ಗಂಟೆಯವರೆಗೆ ನಾನು ಮನೆಯಲ್ಲೇ ಇದ್ದೆ. ಮೈಕೈ ನೋವಿಗೆ ಮನೆಯಲ್ಲೇ ಟ್ರೀಟ್ ಮೆಂಟ್ ತೆಗೆದುಕೊಂಡೆ.

**13.** ಈಶ್ವರಮಂಗಲದಲ್ಲಿ ಒಂದು ಪೊಲೀಸು ಹೊರಠಾಣೆ ಇದೆ ಎಂದರೆ ನಿಜ. ಹೊರಠಾಣೆಯಲ್ಲಿ ಒಬ್ಬ ಎಎಸ್ಐ ಇರುತ್ತಾರೆ ಎಂದರೆ ನಿಜ. ಕುಕ್ಕಾಜೆಯಿಂದ ಈಶ್ವರಮಂಗಲಕ್ಕೆ ಬರುವ ರಸ್ತೆಯು ಭಾರೀ ಜನ ಸಂದಣಿ ಇರುವ ರಸ್ತೆ ಎಂದರೆ ನಿಜ. ನಾನು ಘಟನೆ ನಡೆಯಿತೆನ್ನಲಾದ ನಂತರ ರಸ್ತೆಯಲ್ಲಿ ಇರಲಿಲ್ಲ. ಓಡಿಕೊಂಡು ಗುಡ್ಡೆಗೆ ಹೋಗಿದ್ದೆನು. ಅದು ಸುಮಾರು **200** ಮೀಟರ್ ದೂರದಲ್ಲಿದೆ. ಆ ದಿನ ನಾನು ಈಶ್ವರಮಂಗಲದ ಎ.ಎಸ್.ಐ.ರವರಿಗೆ ವಿಷಯವನ್ನು ಹೇಳಿದ್ದೇನೆ. ರಾತ್ರಿ **9.30** ಗಂಟೆಗೆ ನಾನು ಹೇಳಿದ್ದೇನೆ. ನನ್ನ ಬಳಿ ಮೊಬೈಲ್ ಫೋನ್ ಇದೆ.

**14.** ನಾನು ವ್ಯವಹಾರದಲ್ಲಿ ಚತುರನಾಗಿದ್ದೇನೆ ಎಂದರೆ ನಿಜ. ಈ ಘಟನೆಯ ಬಗ್ಗೆ ನನ್ನ ಸ್ನೇಹಿತರಿಗೆ ಯಾರಿಗೂ ಹೇಳಲಿಲ್ಲ, ಆದರೆ ನನ್ನ ಮನೆಯವರಿಗೆ ಮಾತ್ರ ಹೇಳಿದ್ದೆನು.. ನಾನು ಫೋನಿನಲ್ಲಿ ಬೆಳಿಗ್ಗೆ **8.30** ಗಂಟೆಗೆ ಅವರಿಗೆ ಹೇಳಿದ್ದೆನು. ಬೆಳಿಗ್ಗೆ **8.30** ಗಂಟೆಗೆ ನನ್ನ ಮನೆಯವರು ಮನೆಯಲ್ಲಿ ಇರಲಿಲ್ಲ. ಅವರು **8.00** ಗಂಟೆಗೆ ಮನೆಯಿಂದ ಹೊರಟಿದ್ದರು. ಘಟನೆ ನಡೆದಿದೆ ಎನ್ನಲಾದ ರಸ್ತೆಯು ಈಶ್ವರಮಂಗಲದಿಂದ ನಮ್ಮ ಮನೆಗೆ ಮತ್ತು ಪುತ್ತೂರಿಗೆ ಬರುವ ರಸ್ತೆಯಾಗಿರುತ್ತದೆ. ನನ್ನ ಪ್ರಕಾರ ಘಟನೆಯು **7.15** ಗಂಟೆಯಿಂದ **7.30** ಗಂಟೆಯ ಒಳಗೆ ನಡೆದಿತ್ತು. ಈ ನಡುವೆ ನನ್ನ ಮನೆಯವರು ಅದೇ ರಸ್ತೆಯಲ್ಲಿ ಹೋಗಿರಲಿಲ್ಲ.

**15.** ಚಾ.ಸಾ.**3**, ಅವರ ತಂದೆ ಮತ್ತು ಅವರ ದೊಡ್ಡಪ್ಪನವರ ಮೇಲೆ ಹಾಕಿದ್ದ ಕೇಸಿನಲ್ಲಿ ನಾನು **1**ನೇ ಆರೋಪಿಯ ಅಧಿಕಾರ ಪತ್ರವನ್ನು ಹೊಂದಿ ಆ ಕೇಸನ್ನು ನಡೆಸಿದ್ದೇನೆ. ಈ ದಿನ ಚಾ.ಸಾ.**3**ರವರು ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿದ್ದಾರೆ. ಅವರು ನಮ್ಮ ಊರಿನವರು. ನಾನು **1**ನೇ ಆರೋಪಿಯ ಕೆಲಸವನ್ನು ಬಿಟ್ಟ ನಂತರ ಈಗ ಚಾ.ಸಾ.**3**ರವರ ಜೊತೆ ಅನ್ಯೋನ್ಯವಾಗಿದ್ದೇನೆ. ನಾನು ಚಾ.ಸಾ.**3**ರವರ ವಿರುದ್ಧ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಾಗ ಸರಿಯಾಗಿ ಸಾಕ್ಷಿ ಹೇಳಿಲ್ಲ ಎಂದು **1**ನೇ ಆರೋಪಿಯು ನನಗೆ ನೀಡಿದ್ದ ಅಧಿಕಾರ ಪತ್ರವನ್ನು ರದ್ದುಪಡಿಸಿದ್ದರು.. ಸುಮಾರು **25** ವರ್ಷಗಳಿಂದ

ಚಾ.ಸಾ.3, ಅವರ ತಂದೆ ಮತ್ತು ದೊಡ್ಡಪ್ಪ ಮತ್ತು 1ನೇ ಆರೋಪಿಯ ನಡುವೆ ಸಿವಿಲ್ ವಿವಾದ ಇದ್ದು, ಅವರಿಗೆ ಮನಸ್ತಾಪ ಇತ್ತು ಎಂದರೆ ನಿಜ. 1ನೇ ಆರೋಪಿಯನ್ನು ಸಿಕ್ಕಿಸಬೇಕೆಂದು ಅವರ ಮೇಲೆ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪುತ್ತೂರು ಇಲ್ಲಿ ಚಾ.ಸಾ.3ರವರ ತಂದೆ ಅನಂತ ರೈಯವರು ಖಾಸಗಿ ಫಿರ್ಯದನ್ನು ಕೊಟ್ಟಿದ್ದರು ಎಂದರೆ ನಿಜ. ಆ ಕೇಸಿನಲ್ಲಿ ನನ್ನನ್ನು ಸೇರಿಸಿದ್ದರು ಎಂದರೆ ನಿಜ. ಆದರೆ ಆ ಕೇಸಿನಲ್ಲಿ ನಮ್ಮನ್ನು ಆರೋಪಿಗಳನ್ನಾಗಿ ಈ ತನಕವೂ ಮಾಡಿರುವುದಿಲ್ಲ. ಆ ಸಮಯದಲ್ಲಿ ನನ್ನನ್ನು ಮತ್ತು 1ನೇ ಆರೋಪಿಯನ್ನು ಸೇರಿಸಿ ಏನಾದರೂ ಮಾಡಿ ಸಿಕ್ಕಿಸಬೇಕೆಂಬ ಉದ್ದೇಶದಿಂದ ಕೇಸುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪಿಕೊಂಡಿರುವ ಖಾಸಗಿ ಫಿರ್ಯಾದಿ ಸಂಖ್ಯೆ 8/2008 ರ ಫಿರ್ಯಾದನ್ನು ನಿ.ಡಿ.1 ಎಂದು ಗುರುತಿಸಲಾಯಿತು.

**16.** ಘಟನೆ ನಡೆಯಿತೆನ್ನಲಾದ ಆರೋಪಿಗಳು ಕಣ್ಣು ಮಾತ್ರ ಕಾಣುವಂತೆ ಕೋಟಿನ ತರಹ ಇರುವಂತಹ ಉಡುಪನ್ನು ಧರಿಸಿದ್ದರು. ಆರೋಪಿಗಳ ಕಣ್ಣು ಮಾತ್ರ ಕಾಣುವಂತೆ ದೇಹವನ್ನು ಕವರ್ ಮಾಡಿಕೊಂಡು ಬಟ್ಟೆ ಧರಿಸಿದ್ದರು ಎಂಬುದನ್ನು ನ್ಯಾಯಾಲಯದಲ್ಲಿ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಈ ವಿಚಾರವನ್ನು ಪೊಲೀಸರ ಮುಂದೆ ನಾನು ಹೇಳಿಲ್ಲ. ಮರುಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಕೊಟ್ಟಿದ್ದೇನೆಂದು ಹೇಳುವ ಮರುಹೇಳಿಕೆಯಲ್ಲಿ ಈ ವಿಚಾರ ಕಂಡು ಬರುವುದಿಲ್ಲ ಎಂದರೆ ನಿಜ. ಇದೇ ರೀತಿಯಲ್ಲಿ ಸಾಕ್ಷಿದಾರರಾದ ಚಾ.ಸಾ.6ರವರ ಮುಂದೆ ಆರೋಪಿಗಳು ಕಣ್ಣನ್ನು ಹೊರತುಪಡಿಸಿ ಬಟ್ಟೆಯಿಂದ ಮುಖವನ್ನು ಮುಚ್ಚಿಕೊಂಡಿದ್ದರು ಎಂದು ಹೇಳಿರುವುದಿಲ್ಲ.

**17.** ನಾನು ದೂರಿನಲ್ಲಿ 1ನೇ ಆರೋಪಿಯ ಹೆಸರನ್ನು ಉಲ್ಲೇಖ ಮಾಡಿಲ್ಲ ಎಂದರೆ ನಿಜ. 2ನೇ ಆರೋಪಿಯು ಹೊದ್ದುಕೊಂಡಿದ್ದ ಎನ್ನಲಾದ ಕಂಬಳಿಯನ್ನು ಪೊಲೀಸರು ಅಮಾನತುಪಡಿಸಿಕೊಂಡಿದ್ದಾರಾ ಎಂದು ನನಗೆ ಗೊತ್ತಿಲ್ಲ. ನಂತರ ಪೊಲೀಸರು 2ನೇ ಆರೋಪಿಗೆ ಕಂಬಳಿಯನ್ನು ಹೊದಿಸಿ ನನಗೆ ತೋರಿಸಿರುವುದಿಲ್ಲ.

**18.** ಸಾಮಾನ್ಯವಾಗಿ ನೇರವಾಗಿ ಘಟನೆಗಳು ನಡೆದಾಗ ಒಳಸಂಚಿನ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಹೊರತುಪಡಿಸಿ ನನ್ನನ್ನು ಕೊಲೆ ಮಾಡಲು ಒಳಸಂಚು ಮಾಡಿದವರ ಪೈಕಿ ಚಾ.ಸಾ.**5** ರವಿಗೌಡ ರವರು ಸೇರಿದ್ದರು. ನನಗೆ ಚಾ.ಸಾ.**5**ರವರಿಂದಲೂ ಜೀವಭಯ ಇದೆ, ಆತನು ಒಳಸಂಚಿನಲ್ಲಿ ಶಾಮೀಲಾಗಿದ್ದಾನೆ, ಆದ್ದರಿಂದ ಆತನನ್ನು ಆರೋಪಿಯನ್ನಾಗಿ ಮಾಡಿ ಎಂದು ನಾನು ಪೊಲೀಸರಲ್ಲಿ ಹೇಳಿರುವುದಿಲ್ಲ.

**19.** **1**ನೇ ಆರೋಪಿ ನನಗೆ ಗೊತ್ತಾಗಲಿಲ್ಲ ಎಂದು ಹೇಳಲು ಸಾಧ್ಯವಿಲ್ಲ ಎನ್ನುವುದು ನಿಜ. ನಿ.ಪಿ.**13**ರಲ್ಲಿ ಇರುವಂತಹ ಜೀಪಿನಲ್ಲಿ ಒಬ್ಬ ವ್ಯಕ್ತಿ ಕುಳಿತರೆ ಕಾಣುತ್ತದೆ ಎನ್ನುವುದು ನಿಜ. ನಾನು ಓಡಿ ಹೋಗುವಾಗ ಹಾಲಿನ ಕ್ಯಾನನ್ನು ಸ್ಥಳದಲ್ಲೇ ಬಿಟ್ಟು ಹೋಗಿದ್ದೆ. ಆ ಕ್ಯಾನು ಬೇಕು, ಅದಕ್ಕೆ ಡ್ಯಾಮೇಜ್ ಆಗಿದೆಯಾ ಎಂದು ನೋಡಬೇಕು ಎಂದು ಪೊಲೀಸರು ಕೇಳಲಿಲ್ಲ. ನಂತರ ನಾನು ಕ್ಯಾನನ್ನು ಮನೆಗೆ ತೆಗೆದುಕೊಂಡು ಹೋಗಿದ್ದೆ. ಮು.ಮಾ.**1** ಪ್ಲಾಸ್ಟಿಕನ್ನು ಘಟನೆ ನಡೆಯಿತೆನ್ನಲಾದ ದಿನ ನಾನು ಉಪಯೋಗಿಸಿದ್ದೆ ಎಂದು ತೋರಿಸಲು ಅದರ ಮೇಲೆ ಯಾವುದೇ ವಿಶೇಷ ಗುರುತುಗಳಿಲ್ಲ. ಸಾಮಾನ್ಯವಾಗಿ ಆ ರೀತಿಯ ಪ್ಲಾಸ್ಟಿಕ್ ಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ.

**20.** ರಾಡ್ ಜೊತೆಗೆ ಜೀಪಿನ ಫೋಟೊವನ್ನು ತೆಗೆದಿರುವುದಿಲ್ಲ. ಆ ಜೀಪಿನಲ್ಲಿ ರಾಡ್ ಎಲ್ಲಿತ್ತು ಎಂದು ತೋರಿಸಲು ಆ ಸ್ಥಳದ ಫೋಟೊವನ್ನು ತೆಗೆದಿರುವುದಿಲ್ಲ. ಮಹೀಂದ್ರ ಜೀಪಿನಲ್ಲಿ ರಾಡ್ ಫಿಕ್ಸ್ ಮಾಡಲು ಜಾಗನೇ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರಾಡ್ ನ ತುದಿ ಬಗ್ಗಿತ್ತು, ಅದನ್ನು ನಾನು ಗುರುತು ಮಾಡಿಕೊಂಡಿದ್ದೇನೆ. ಮು.ಮಾ.**2** ಒಂದು ಪೈಪು ಎಂದರೆ ನಿಜ. ಸಾಮಾನ್ಯವಾಗಿ ಗುಜುರಿಗಳಲ್ಲಿ ಇಂತಹ ಪೈಪುಗಳು ಸಿಗುತ್ತವೆ ಎಂದರೆ ಸರಿಯಲ್ಲ.

**21.** ನಾನು ಮತ್ತು ಪ್ರಾ.ಸಾ.**1**-ಆಸಿರ್ ಚೆನ್ನಾಗಿದ್ದೇವೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದ ಕಾರಣ ಪಾಟೀ ಸವಾಲನ್ನು ಮಧ್ಯಾಹ್ನ **3.00** ಗಂಟೆಗೆ ಮುಂದೂಡಲಾಯಿತು.

ಓದಿ ಹೇಳಿ, ಕೇಳಿ ಸರಿ ಇದೆ,

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು ಕಾರ್ಯನಿರ್ವಹಣೆಃ ಪುತ್ತೂರು, ದ.ಕ.

ಮಧ್ಯಾಹ್ನ 3.45 ಗಂಟೆ

ಮುಂದುವರಿದ **ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ-

22. ಈಶ್ವರಮಂಗಲದ ಮಹಾವಿಷ್ಣು ದೇವಸ್ಥಾನ, ಕುತ್ಯಾಲ ಗೊತ್ತು. ಅಲ್ಲಿ ನಾನು 12 ವರ್ಷ ಕಾರ್ಯನಿರ್ವಾಹಕನಾಗಿದ್ದೆ. ಈಗ ಇಲ್ಲ. ನಾನು ಆರೋಪಿಗಳ ಜೊತೆ ಇರುವಾಗ ಆ ದೇವಸ್ಥಾನದ ಕಾರ್ಯನಿರ್ವಾಹಕನಾಗಿದ್ದೆ. ಆ ದೇವಸ್ಥಾನವು 1ನೇ ಆರೋಪಿಯ ಆಡಳಿತಕ್ಕೊಳಪಟ್ಟ ದೇವಸ್ಥಾನವಾಗಿತ್ತು. ಒಮ್ಮೆ ಆ ದೇವಸ್ಥಾನದ ಬಂಗಾರವು ಅಸ್ತವ್ಯಸ್ತವಾಗಿತ್ತು ಎಂದರೆ ನಿಜ. ಅದು ನಾನು ಕಾರ್ಯನಿರ್ವಾಹಕನಾಗುವ ಮುಂಚೆ. ಅದು ಕಳ್ಳತನವಾಗಿತ್ತು ಮತ್ತು ಅದಕ್ಕೆ ನಾನೇ ಜವಾಬ್ದಾರನಾಗಿದ್ದೇನೆಂದು ಆರೋಪ ಮಾಡಿದ್ದರು ಎಂದರೆ ಸರಿಯಲ್ಲ. ಸದ್ರಿ ಕೆಲಸವನ್ನು ನಾನೇ ಮಾಡಿದ್ದೆ ಎಂದು ನನ್ನನ್ನು ಆ ಕೆಲಸದಿಂದ ತೆಗೆದು ಹಾಕಿದ್ದರು ಎಂದರೆ ಸರಿಯಲ್ಲ.

23. ಚಾ.ಸಾ.3ರವರ ತಂದೆ ಅನಂತ ರೈಯವರು 1ನೇ ಆರೋಪಿಯ ಗೇಣಿ ಒಕ್ಕಲಾಗಿದ್ದರು ಎಂದರೆ ನಿಜ. ನಾನು ಪೊಲೀಸರಿಗೆ ದೂರು ಕೊಡುವ ಮುಂಚೆ ದೂರು ಹೇಗೆ ಕೊಡಬೇಕೆಂದು ಪೊಲೀಸರಲ್ಲಿ ಮಾತನಾಡಿರುವುದಿಲ್ಲ. ಆ ದೂರನ್ನು ನನ್ನ ತಮ್ಮ ಬರೆದಿದ್ದನು. ರಾತ್ರಿ 10.00 ಗಂಟೆಗೆ ನನ್ನ ತಮ್ಮ ದೂರನ್ನು ಮನೆಯಲ್ಲಿ ಬರೆದಿದ್ದನು. ನನ್ನ ದೂರಿನಲ್ಲಿ "ಆಳ್ವನ ಚಾಲಕನಾದ ಉದಯ ಚೆಕ್ಕಿತ್ತಾಯನ ಮುಖಾಂತರ ಜೀಪಿನಿಂದ ನನ್ನ ಮೋಟಾರ್ ಸೈಕಲಿಗೆ ಡಿಕ್ಕಿ ಉಂಟು ಮಾಡಿ ಕೊಲೆ ಮಾಡಲು ಒಳಸಂಚು ಮಾಡಿರುವುದಾಗಿದೆ." ಎಂಬ ಈ ವಾಕ್ಯದ ಅರ್ಥ ಏನೆಂದು ನನಗೆ ಗೊತ್ತಾಗುವುದಿಲ್ಲ. ನನ್ನ ತಮ್ಮ 8.30-9.00 ಗಂಟೆಗೆ ನನಗೆ ಮನೆಯಲ್ಲೇ ಸಿಕ್ಕಿದನು. ಸಂಪ್ಯ ಗ್ರಾಮಾಂತರ ಪೊಲೀಸರಿಗೆ ನಾನು ಈ ದೂರನ್ನು ಕೊಟ್ಟೆನು. ನಾನು ಈಶ್ವರಮಂಗಲ ಹೊರಠಾಣೆಗೆ ರಾತ್ರಿಯೇ ಹೋದಾಗ ಅಲ್ಲಿದ್ದ ಪಿ.ಸಿ.ಯವರು ಎ.ಎಸ್.ಐ.ರವರು ಇಲ್ಲದ ಕಾರಣ ಸಂಪ್ಯ ಪೊಲೀಸು ಠಾಣೆಗೆ ದೂರು ಕೊಡಿ ಎಂದು ಹೇಳಿದ್ದರಿಂದ ನಾನು

ಸಂಪ್ಯ ಪೊಲೀಸು ಠಾಣೆಗೆ ಹೋಗಿ ದೂರನ್ನು ಕೊಟ್ಟೆ. ಅದೇ ಎ.ಎಸ್.ಐ.ರವರಿಗೆ ನಾನು ಮೊದಲು ಫೋನ್ ಮಾಡಿದ್ದೆ. ಆದರೆ ಘಟನೆಯ ಬಗ್ಗೆ ಏನೂ ಹೇಳಿರಲಿಲ್ಲ.

24. ನನಗೆ ಪಿ.ಎಸ್.ಐ. ರವಿಯವರು ಚೆನ್ನಾಗಿ ಪರಿಚಯವಿದ್ದಾರೆ. ಒಬ್ಬ ಸಂತೋಷ್ ಎಂಬವರ ಪತ್ನಿ ಪ್ರೀತಿ ಎನ್ನುವವರು ನನಗೆ ಗೊತ್ತು. ಅವರು 1ನೇ ಆರೋಪಿಯ ಬಳಿ ಕೆಲಸಕ್ಕಿದ್ದರು. ಸದ್ರಿ ಸಂತೋಷ್ ರವರು ಹೊಡೆದ ಪರಿಣಾಮವಾಗಿ ಆತನ ಹೆಂಡತಿ ಪ್ರೀತಿ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ನಿಜ. 1ನೇ ಆರೋಪಿಯು ರೂ.16,000 ಬಿಲ್ ಕೊಡಿಸಿ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿತ್ತು ಎಂದರೆ ನಿಜ. ಪಿ.ಎಸ್.ಐ.ಯವರಿಗೂ 1ನೇ ಆರೋಪಿಗೂ ಇದೇ ವಿಚಾರದಲ್ಲಿ ಚರ್ಚೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

25. ಈ ಘಟನೆಯ ಬಗ್ಗೆ ನಾನು ಯಾರ ಹತ್ತಿರವೂ ರಾತ್ರಿ 10.00 ಗಂಟೆಯವರೆಗೆ ಮನೆಯವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹೇಳಿರುವುದಿಲ್ಲ. ನನಗೆ ಚಾ.ಸಾ.4 ರಿಂದ 8, 11 ರಿಂದ 13ರವರು ಗೊತ್ತು. ಅವರು ನನ್ನೊಂದಿಗೆ ಚೆನ್ನಾಗಿದ್ದಾರೆ. ನಾನು ಸ್ಥಳ ಮಹಜರಿಗೆ ಮತ್ತು ಬೈಕು ಅಮಾನತು ಮಹಜರಿಗೆ ಸಾಕ್ಷಿದಾರರನ್ನು ಕರೆದುಕೊಂಡು ಹೋಗಿದ್ದೆ. ದೇವರಗುಂಡ ಎಂಬುವುದು ಮಂಡೆಕೋಲು ಗ್ರಾಮದಲ್ಲಿ ಬರುತ್ತದೆ.

ನಾನು ಪೊಲೀಸರಲ್ಲಿ 2ನೇ ಆರೋಪಿಯು ಮುಖಕ್ಕೆ ಮುಚ್ಚಿಕೊಂಡಿದ್ದ ಬಟ್ಟೆಯ ಅಳತೆಯ ಬಗ್ಗೆ ಹೇಳಿರುವುದಿಲ್ಲ. ನನ್ನ ಮೇಲೆ ಒಂದು ಚೆಕ್ ಬೌನ್ಸ್ ಕೇಸು ಇತ್ತು ಎಂದರೆ ನಿಜ.

26. ಆರೋಪಿಗಳಿಗೆ ಶಿಕ್ಷೆಯಾಗಬೇಕೆಂಬ ಉದ್ದೇಶದಿಂದ ಅವರ ಮೇಲಿನ ದ್ವೇಷದಿಂದ ನಾನು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸಾಕ್ಷಿಗಳು ನನ್ನ ಸಮ್ಮುಖದಲ್ಲಿ ತನಿಖಾಧಿಕಾರಿಯವರ ಮುಂದೆ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ಮಹಜರನ್ನು ನಾನು ಹೇಳಿದ ರೀತಿಯಲ್ಲಿ ಸ್ಥಳದಲ್ಲಿ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿಯ ಘಟನೆಯೇ ನಡೆದಿಲ್ಲ ಮತ್ತು ಇದೆಲ್ಲ ಸೃಷ್ಟನೆ ಎಂದರೆ ಸರಿಯಲ್ಲ. ಪ್ರಾ.ಸಾ.1ರವರು ನನ್ನ ಜೊತೆ ಬೈಕಿನಲ್ಲಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ

ಚಾ.ಸಾ.6ರವರು ಸ್ಥಳದಲ್ಲಿ ನನಗೆ ಸಿಕ್ಕಿರಲಿಲ್ಲ ಎಂದರೆ ಸರಿಯಲ್ಲ. ಜೀಪಿಗೆ ಯಾವುದೇ ರೀತಿಯ ಡ್ಯಾಮೇಜ್ ಆಗಿಲ್ಲ ಎನ್ನುವುದು ನಿಜ. ನನ್ನ ವಾಹನಕ್ಕೂ ಯಾವುದೇ ರೀತಿಯ ಡ್ಯಾಮೇಜ್ ಆಗಿಲ್ಲ ಎಂದರೆ ಸರಿಯಲ್ಲ. ನಾನೇ ಸೃಷ್ಟಿನೆ ಮಾಡಿ ನನ್ನ ವಾಹನವನ್ನು ಗ್ಯಾರೇಜಿಗೆ ತೆಗೆದುಕೊಂಡು ಹೋಗಿ ಅದಕ್ಕೆ ಡ್ಯಾಮೇಜ್ ಆಗಿದೆ ಎಂದು ಪೊಲೀಸರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ.

27. ಚಾ.ಸಾ.3ರವರಿಗೆ 1ನೇ ಆರೋಪಿಯ ವಿರುದ್ಧ ದ್ವೇಷ ಇರುವುದರಿಂದ ನಾನು ಅವರಿಂದ ಹೊರ ಬಂದ ನಂತರ ನನ್ನನ್ನು ಚಾ.ಸಾ.3ರವರು ಒಂದು ಅಸ್ತ್ರವನ್ನಾಗಿ ಬಳಸಿ ಆರೋಪಿಗಳ ವಿರುದ್ಧ ಎತ್ತಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಯಿಂದ ಇಂತಿಷ್ಟು ಸಂಬಳ ಸಿಗಬೇಕು ಮತ್ತು ಇಂತಿಷ್ಟು ಬಾಕಿ ಇದೆ ಎಂದು ನೋಟೀಸು ಕೊಟ್ಟಿರುವುದಿಲ್ಲ ಮತ್ತು ಪೊಲೀಸು ಠಾಣೆಗೆ ದೂರು ಕೊಟ್ಟಿರಲಿಲ್ಲ. ನಾನು ಅವರ ಮೇಲೆ ಯಾವುದೇ ಸಿವಿಲ್ ಕೇಸನ್ನು ಹಾಕಿರುವುದಿಲ್ಲ. ಚಾ.ಸಾ.3ರವರ ಸಿವಿಲ್ ಕೇಸಿನಲ್ಲಿ ನಾನು 1ನೇ ಆರೋಪಿಯ ಜಿ.ಪಿ.ಎ. ಹೋಲ್ಡರ್ ಆಗಿ ಸಾಕ್ಷಿ ನುಡಿದಿದ್ದೇನೆ ಎಂದರೆ ನಿಜ. ಆ ಕೇಸಿನಲ್ಲಿ ನಾನು ಚಾ.ಸಾ.3ರವರ ಪರವಾಗಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಯ ಜೊತೆಗಿದ್ದರೂ ಕೂಡ ನನಗೆ ಚಾ.ಸಾ.3ರವರ ಜೊತೆ ಮೊದಲಿನಿಂದಲೂ ಸ್ನೇಹ ಇತ್ತು ಎಂದರೆ ಸರಿಯಲ್ಲ. ನಾನು, ಚಾ.ಸಾ.3 ಮತ್ತು ಪಿ.ಎಸ್.ಐ. ರವಿಯವರು ಚರ್ಚೆ ಮಾಡಿ ಒಂದು ಸುಳ್ಳು ದೂರನ್ನು ತಡವಾಗಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈ ಘಟನೆಗೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪನ್ನು ಮಾಡದಿದ್ದರೂ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**
**ಓದಿ ಹೇಳಿ, ಕೇಳಿ ಸರಿ ಇದೆ,**

**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದ.ಕ. ಮಂಗಳೂರು ಕಾರ್ಯನಿರ್ವಹಣೆ: ಪುತ್ತೂರು, ದ.ಕ.**